**AS – 008**

**II ಸೆಮಿಸ್ಟರ್ ಬಿ.ಎಸ್ಸಿ. ಪರೀಕ್ಷೆ, ಏಪ್ರಿಲ್/ಮೇ 2012**
**(ರಿಪೀಟರ್ಸ್ ಸ್ಕೀಮ್) (2010–11)**
**ಕನ್ನಡ ಭಾಷೆ – II**
**ಸಾಹಿತ್ಯ ಸಮನ್ವಯ – ೨ ಮತ್ತು ಚಿರಸ್ಮರಣೆ**

Time : 3 Hours Max. Marks : 90

I. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : **(1×10=10)**

1) ಶೂದ್ರನು ಸರಸ್ವತಿ ವೀಣೆಯನ್ನು ಕಸಿದುಕೊಂಡು ಏನು ಮಾಡಿಕೊಂಡನು ?
2) ನಿರೂಪಕರು ಟೆಲಿಫೋನನ್ನು ಯಾರಿಗೆ ಕೊಡಲು ಕೇಳಿಕೊಂಡರು ?
3) ನೆಲಮಾಳಿಗೆಯಲ್ಲಿ ರೋಧಿಸುತ್ತಿರುವವಳು ಯಾರು ?
4) ಮೊಗೆ ಮೊಗೆದು ಕುಡಿದರೂ ತೀರದ ದಾಹ ಯಾವುದು ?
5) ತಮ್ಮ ಮೊದಲ ತಿಂಗಳ ಸಂಬಳದಲ್ಲಿ ನಿರೂಪಕರು ಏನನ್ನು ಕೊಂಡುಕೊಳ್ಳಲು ನಿಶ್ಚಯಿಸಿದ್ದರು ?
6) ಮೊಸರವಲಕ್ಕಿ ಕಲಸುವ ಕಲೆ ಹೇಗೆ ಬಂದಿರಬೇಕು ?
7) ನಮ್ಮ ಈ ಜಗತ್ತು ಯಾವುದರಲ್ಲಿ ಮುಳುಗಿ ಹೋಗಿದೆ ?
8) ಗಳಗನಾಥರ ಕೃತಿಗಳಲ್ಲಿ ಹೊರಡುವ ರಾಷ್ಟ್ರದ ಕಲ್ಪನೆ ಯಾವುದು ?
9) ಕುಂಞಂಬುವಿನ ಕೈಹಿಡಿದವಳ ಹೆಸರೇನು ?
10) ಅಂಗಡಿ ಡಬ್ಬದಲ್ಲಿ ಮಡಿಚಿಟ್ಟಿದ್ದ ಪತ್ರಿಕೆ ಯಾವುದು ?

II. ಯಾವುದಾದರೂ ಐದಕ್ಕೆ ಟಿಪ್ಪಣಿ ಬರೆಯಿರಿ : **(2×5=10)**

1) ಕೆ.ಎಸ್. ನರಸಿಂಹಸ್ವಾಮಿ
2) ನವ್ಯ ಸಾಹಿತ್ಯ
3) ಲಲಿತ ಪ್ರಬಂಧ
4) ಸುನಂದ ಬೆಳಗಾಂವಕರ್
5) ಕೆ.ಪಿ. ಪೂರ್ಣಚಂದ್ರ ತೇಜಸ್ವಿ
6) ಲೆನಿನ್
7) ನಿರಂಜನ
8) ಕಣ್ಣ

III. ಯಾವುದಾದರೂ ಒಂದು ಕಾವ್ಯಭಾಗವನ್ನು ವಿಶ್ಲೇಷಿಸಿ. **(1×6=6)**

1) ಪಂಚ ಭೂತಗಳೆಲ್ಲ ಮಾನವನ ದೇಹದಲಿ
ಹೊಂಚುಹಾಕುತ ದಾರಿ ಕಾಯುತಿಹವು
ಕಿಂಚಿತಾದರು ಕರುಣೆಕೊನರೊಡೆದು ಬಾರದಿರೆ
ಈ ಪ್ರಪಂಚವೆ ಚಿತೆಯನೇರಲಿಹುದು

P.T.O.

www.onlinebu.com
www.onlinebu.com

2) ಪಾಪ ಯಾರೋ ಸತ್ತು ನನ್ನ ಹೆಸರಿಗೆ ಬಂದ
ಈ ಕಳಂಕವ ತೊಡೆದುಬಿಡುವೆನೆಂದು
ಬಿಗಿಹಿಡಿದ ಮುಷ್ಟಿಯನು ನೋಡಿಕೊಂಡೆ
ಪಾಣಿಪಂಚೆಯನುಟ್ಟು ನೀರುಮನೆಗೋಡಿದೆ ;
ನೀರು ನಿಲ್ಲುವ ಸಮಯ ನಲ್ಲಿಯಲ್ಲಿ,
ಇದ್ದಷ್ಟೆ ನೀರಿನಲಿ ಗಂಗಾಸ್ನಾನ ಮಾಡಿ
ಸತ್ತವನಿಗಾಗಿ ತುಪ್ಪದ ದೀಪ ಹಚ್ಚಿದೆ ;

IV. ಯಾವುದಾದರೂ ಆರು ಪ್ರಶ್ನೆಗಳಿಗೆ ಉತ್ತರಿಸಿ : **(4×6=24)**

1) ''ಏಳು ಸುತ್ತಿನ ಕೋಟೆ'' ಕವನದ ಆಶಯವೇನು ? ವಿಶದಪಡಿಸಿ.
2) ''ರಾಮನ್ ಸತ್ತ ಸುದ್ದಿ'' ಹನುಮ ಮತ್ತು ನಿರೂಪಕರ ಮೇಲೆ ಉಂಟುಮಾಡಿದ ಪರಿಣಾಮವೇನು ? ವಿವರಿಸಿ.
3) ವೈಜ್ಞಾನಿಕ ಯುಗದಲ್ಲೂ ಹರಕೆ ತೀರಿಸುವ ಜನರನ್ನು ಕಂಡಾಗ ಲೇಖಕರಿಗೆ ಆದ ಅನುಭವಗಳೇನು ?
4) ಮೊಸರವಲಕ್ಕಿಯೊಡನೆ ಮೂಡಿದ ಮಧುರ ನೆನಪುಗಳಾವುವು ?
5) ಟ್ರಿಸ್ಟಾನ ದ್ವೀಪದ ಕತೆಯನ್ನು ವಿವರಿಸಿ.
6) ರಾಷ್ಟ್ರೀಯತೆಯ ಪ್ರಮುಖ ಲಕ್ಷಣಗಳಾವುವು ?
7) ಅಪ್ಪು–ಚಿರಕುಂಡ ಪಂಡಿತರನ್ನು ಭೇಟಿಯಾದ ಪ್ರಸಂಗವನ್ನು ವಿವರಿಸಿ.
8) ರೈತ ಸಂಘದ ಧ್ಯೇಯೋದ್ದೇಶಗಳೇನು ?

V. ವಿಶ್ಲೇಷಣಾತ್ಮಕ ಉತ್ತರ ಬರೆಯಿರಿ : **(10×4=40)**

1) ಕಾವ್ಯಕ್ಕೆ ವಸ್ತು ಯಾವುದಾದರೂ ಆಗಬಹುದು ಎಂಬುದನ್ನು ''ಗೊಬ್ಬರ'' ಕವನ ಪ್ರತಿಪಾದಿಸುವ ಬಗೆಯನ್ನು ವಿವೇಚಿಸಿ.

**ಅಥವಾ**

''ಏನಾದರು ಮಾಡುತಿರು ತಮ್ಮ'' ಕವಿತೆಯ ಆಶಯವನ್ನು ವಿಶ್ಲೇಷಿಸಿ.

2) 'ಹಸಿವು' ಪ್ರಬಂಧದಲ್ಲಿ ವಿದ್ಯಾರ್ಥಿಗಳಿಗಾದ ಪ್ರವಾಸದ ಅನುಭವಗಳನ್ನು ವಿವರಿಸಿ.

**ಅಥವಾ**

'ಮುಳುಗುತ್ತಿರುವವನು ಹುಲ್ಲುಕಡ್ಡಿಯನ್ನಾದರೂ ಹಿಡಿಯಲೇಬೇಕು' ಎಂಬ ಅನುಭವೋಕ್ತಿಯೊಡನೆ ''ಹರಕೆಗಳು'' ಪ್ರಬಂಧವನ್ನು ಚರ್ಚಿಸಿ.

3) ಜಿಡ್ಡು ಕೃಷ್ಣಮೂರ್ತಿಯವರ ಶಿಕ್ಷಣವನ್ನು ಕುರಿತ ಚಿಂತನೆಯನ್ನು ವಿವೇಚಿಸಿ.

**ಅಥವಾ**

ಮಾನವರ ಪ್ರೇಮ ಜೀವನ ಹಂತ ಹಂತವಾಗಿ ಬೆಳೆದ ಬಗೆಯನ್ನು ವಿಶ್ಲೇಷಿಸಿ.

4) 'ಕಯ್ಯೂರಿನ ವೀರಗಾಥೆ'ಯನ್ನು ಸಂಗ್ರಹವಾಗಿ ವಿವರಿಸಿ.

**ಅಥವಾ**

ಚಿರಕುಂಡ, ಪಂಡಿತ, ಮಾಸ್ತರು ಇವರುಗಳಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿಕೊಡಿ.

www.onlinebu.com
www.onlinebu.com
http://www.onlinebu.com

**AS – 008**

## II ಸೆಮಿಸ್ಟರ್ ಬಿ.ಎಸ್ಸಿ./ಬಿ.ಸಿ.ಎ. ಪರೀಕ್ಷೆ, ಎಪ್ರಿಲ್/ಮೇ 2012
## (Repeaters Prior to 2010–11 Scheme)
## ಕನ್ನಡ ಭಾಷೆ – II
## ಸಾಹಿತ್ಯ ಸಂವಾದ - ೧

Time : 3 Hours Max. Marks : 90

1. ಐದು ಪದಗಳಿಗೆ ಅರ್ಥ ಬರೆಯಿರಿ : **(1×5=5)**

   ಉಯಿಲು, ತಂಬೆಲರು, ಹೆಳಲು, ಪೀತಾಂಬರ, ಥಳಿಸು, ವೃಕ್ಷ, ಯೋಧ.

2. ಐದು ಪದಗಳಿಗೆ ಪರ್ಯಾಯ ಪದಗಳನ್ನು ಬರೆಯಿರಿ : **(1×5=5)**

   ಜಲ, ಕಾಂತಿ, ಕಾಲ, ಶ್ಮಶಾನ, ಶೃಂಗಾರ, ನಕ್ಷತ್ರ, ಅಗ್ನಿ.

3. ಐದು ಪದಗಳನ್ನು ಬಳಸಿಕೊಂಡು ಒಂದೊಂದು ವಾಕ್ಯ ರಚಿಸಿ : **(1×5=5)**

   ತಿಳುವಳಿಕೆ, ಹಂಬಲಿಸು, ಅವಸರ, ಗಂಟುಮೂಟೆ, ನೆಲಸಮ, ಎರಡು ಬಗೆ, ಬೆನ್ನು ತಟ್ಟು

4. ಐದು ಅನುಕರಣ ಪದಗಳನ್ನು ಬರೆಯಿರಿ. **(1×5=5)**

5. ನಾಲ್ಕು ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ. **(1×4=4)**

   ಈಳ್ಯ, ಮದ್ವ, ಗರುಗ್ಸ, ಗ್ರಾಚಾರ, ಉಪಣ್ಯಾಸ, ಹುಡ್ಕು.

6. ಎರಡು ಗಾದೆ ಮಾತುಗಳನ್ನು ವಿಸ್ತರಿಸಿ : **(2×3=6)**

   1) ಆಳಾಗ ಬಲ್ಲವನು ಅರಸಾಗಬಲ್ಲ

   2) ಇಬ್ಬರ ಜಗಳ ಮೂರನೆಯವನಿಗೆ ಲಾಭ

   3) ಹಾಸಿಗೆ ಇದ್ದಷ್ಟು ಕಾಲುಚಾಚು.

7. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ : **(4×5=20)**

   1) ಧನಿಯರ ಮತ್ತು ಎತ್ತುಗಳ ಋಣವನ್ನು ಚೋಮ ಹೇಗೆ ತೀರಿಸಿಕೊಂಡನು ?

   2) ರಾಜಕುಮಾರ ನಾಗಮಣಿಯನ್ನು ಪಡೆದದ್ದು ಹೇಗೆ ?

www.onlinebu.com

www.onlinebu.com

3) 'ತೆನಾಲಿರಾಮನ ಕನಸಿ'ನಲ್ಲಿ ಅವನ ಬುದ್ಧಿಶಕ್ತಿ ಹೇಗೆ ಪ್ರಕಟವಾಗಿದೆ ?

4) ವಸಂತಾಗಮನವನ್ನು ಕುಮಾರವ್ಯಾಸನು ಹೇಗೆ ವರ್ಣಿಸಿದ್ದಾನೆ ?

5) ಮಂಚಕ್ಕೆ ದುಃಖ ಉಕ್ಕಿಬರಲು ಕಾರಣವೇನು ?

6) ಕುವೆಂಪು ಅವರು ಚಿತ್ರಿಸಿರುವ ಚಂದ್ರಯ್ಯಗೌಡರ ವ್ಯಕ್ತಿತ್ವ ಎಂಥದ್ದು? ವಿವರಿಸಿ.

8. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : **(2×10=20)**

1) ಪಿತೂರಿಗಾರರ ವಿರುದ್ಧ ಪ್ರಜೆಗಳನ್ನು ರೊಚ್ಚಿಗೆಬ್ಬಿಸಿದ್ದು ಯಾರು ? ಮತ್ತು ಹೇಗೆ ? ವಿವರಿಸಿ.

2) 'ಯೋಧ ಮತ್ತು ಹೆಂಗಸು' ಕವನದ ಆಶಯವೇನು ? ವಿವರಿಸಿ.

3) ಕುವೆಂಪು ಅವರ 'ಕಲ್ಕಿ' ಕವನದಲ್ಲಿ ವ್ಯಕ್ತವಾಗುವ ಸಾಮಾಜಿಕ ಕಾಳಜಿಯನ್ನು ಕುರಿತು ಚರ್ಚಿಸಿ.

4) ರಾಜಕುಮಾರ ತಂದೆಯ ಕನಸನ್ನು ನಿಜ ಮಾಡಿದ್ದು ಹೇಗೆ ? ವಿವರಿಸಿ.

9. ಎರಡು ಪ್ರಶ್ನೆಗಳಿಗೆ ಸ್ವಂತ ಆಲೋಚನೆಯ ಹಿನ್ನೆಲೆಯಲ್ಲಿ ಉತ್ತರಿಸಿ : **(2×10=20)**

1) "ಅಧಿಕಾರ ದಾಹದಿಂದ ಸಂಬಂಧಗಳು ಅರ್ಥಹೀನವಾಗುತ್ತವೆ" – ಈ ಮಾತನ್ನು ಭರತ, ಬಾಹುಬಲಿಯರ ಯುದ್ಧದ ಹಿನ್ನೆಲೆಯಲ್ಲಿ ಸಮರ್ಥಿಸಿ.

2) "ರಾಜಕೀಯದ ಹಿಂಸಾತ್ಮಕ ರೂಪವೇ ಯುದ್ಧ" – ಈ ಹೇಳಿಕೆಗೆ ನಿಮ್ಮ ಪ್ರತಿಕ್ರಿಯೆಯೇನು ?

3) ಮಳೆಗಾಲದ ವರ್ಣನೆಯಲ್ಲಿ ವ್ಯಕ್ತವಾಗಿರುವ ಮುದ್ದಣನ ಕಲ್ಪನಾ ಶಕ್ತಿಯನ್ನು ಕುರಿತು ಬರೆಯಿರಿ.

4) ತಂದೆ, ತಾಯಿ ಮತ್ತು ಮಗುವಿನ ಸಂಬಂಧ 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

www.onlinebu.com

www.onlinebu.com
http://www.onlinebu.com